(SRI B. D. JATTI)

(*d*) 16 candidates were removed from service for the following reasons:—

(*i*) want of vacancies,

(*ii*) availability of approved candidates,

(*iii*) conversion of clerical posts into those of typists.

ಶ್ರೀ ಬಿ. ಇ. ರಾಮಯ್ಯ.—ಎರಡು ವರ್ಷಗಳಿಂದ ಲೋಕಲ್ ಕ್ಯಾಂಡಿಡೇಟುಗಳ ಅಪಾಯಿಂಟ್‌ಮೆಂಟು ಗಳನ್ನು ಏಕೆ ರೆಗ್ಯುಲರೈಸ್ ಮಾಡಿಲ್ಲ?

ಶ್ರೀ ಬಿ. ಡಿ. ಜತ್ತಿ.—ಈ ಪ್ರಶ್ನೆ ಕಠಿಣವಿದೆ. ಏಕೆಂದರೆ ಒಂದು ತರಹ ಲೋಕಲ್ ಕ್ಯಾಂಡಿಡೇಟ್ಸ್ ಇಲ್ಲ. ಫಸ್ಟ್‌ಟೈಮ್, 1-10-1953ರವರೆಗಿನ ಲೋಕಲ್ ಕ್ಯಾಂಡಿಡೇಟುಗಳನ್ನು ರೆಗ್ಯುಲರೈಸ್ ಮಾಡಿದೆ. ನಂತರ 1-10-1953 ರಿಂದ 30-11-1954ರವರೆಗಿದ್ದವರನ್ನು ರೆಗ್ಯುಲರೈಸ್ ಮಾಡಿದೆ. ಅದರಮೇಲೆ ಲೋಕಲ್ ಆಫೀಸರ್ಸ್ ಲೋಕಲ್ ಕ್ಯಾಂಡಿಡೇಟುಗಳನ್ನು ನೇಮಕಮಾಡಿ ದ್ದಾರೆ. ಅವರ ಬಗ್ಗೆ ಗವರ್ನ್‌ಮೆಂಟ್ ಕನ್‌ಸಿದರ್ ಮಾಡುತ್ತಾರೆ.

ಶ್ರೀ ಬಿ. ಇ. ರಾಮಯ್ಯ.—ಈ ಲೋಕಲ್ ಕ್ಯಾಂಡಿ ಡೇಟುಗಳಲ್ಲಿ 240 ಮಂದಿ ಪಬ್ಲಿಕ್‌ಸರ್ವಿಸ್ ಕಮಿ ಷನ್ನಿಗೆ ಅಪ್ಲೈ ಮಾಡಿಕೊಂಡಿದ್ದರೇ?

ಶ್ರೀ ಬಿ. ಡಿ. ಜತ್ತಿ.—ಅವರು ಅಪ್ಲೈ ಮಾಡಿದ್ದಿಲ್ಲ.

ಶ್ರೀ ಬಿ. ಇ. ರಾಮಯ್ಯ.—240 ಜನ ಅಪ್ಲೈ ಮಾಡಿದ್ದರೂ ಕೂಡ ಒಬ್ಬರನ್ನೂ ಸೆಲೆಕ್ಟ್ ಮಾಡಿಲ್ಲ ವೆಂದು ಗೊತ್ತಾಗಿದೆ. ಏಕೆ?

ಶ್ರೀ ಬಿ. ಡಿ. ಜತ್ತಿ.—ಸೆಲೆಕ್ಟ್ ಮಾಡುವುದು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಡಿಸ್‌ಕ್ರಿಷನ್, ಅವರು ಇದರಲ್ಲಿ ಒಂದು ಸ್ಟ್ಯಾಂಡರ್ಡ್ ಕೀಪ್ ಅಪ್ ಮಾಡುತ್ತಾರೆ. ನಮಗೆ ಇದರಲ್ಲಿ ಜವಾಬ್ದಾರಿ ಇಲ್ಲ.

ಶ್ರೀ ಬಿ. ಇ. ರಾಮಯ್ಯ.—ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಯಾವ ರೀತಿ ಸೆಲೆಕ್ಟ್ ಮಾಡು ತ್ತಾರೆ?

ಶ್ರೀ ಬಿ. ಡಿ. ಜತ್ತಿ.—ಫಿರ್‌ಅಪ್ ಮಾಡುವ ಪೋಸ್ಟುಗಳಿಗೆ, ಕಂಡಿಷನ್ನುಗಳನ್ನು ಪ್ರಿಸ್‌ಕ್ರೈಬ್ ಮಾಡುತ್ತಾರೆ. ಆ ಕಂಡಿಷನ್ನುಗಳ ಪ್ರಕಾರ ಟೆಸ್ಟ್ ಮಾಡಿ ತೆಗೆದುಕೊಳ್ಳುತ್ತಾರೆ.

If it is satisfactory, they will appoint.

Completion of High School Building at Siruguppa.

*Q.—596. Sri B. E. RAMIAH (Siruguppa).—

Will the Government be pleased to state:—

(*a*) whether they are aware that the public of Siruguppa constructed part of the High School building by contributing Rs. 80,000 without Government aid;

(*b*) whether they have received any representation and memoranda to complete the remaining portion of the High School Building;

(*c*) at what stage the matter stands as present?

*A.—Sri ANNA RAO GANAMUKHI (Minister for Education).—

(*a*) Yes.

(*b*) Yes.

(*c*) The plans and estimates for completion of the High School building have not yet been received from the Executive Engineer, P.W.D., Bellary.

ಶ್ರೀ ಬಿ. ಇ. ರಾಮಯ್ಯ.—ಸಿರುಗುಪ್ಪ ಪಬ್ಲಿಕ್ ನವರು 80,000 ರೂಪಾಯಿ ಹಾಕಿ ಹೈಸ್ಕೂಲು ಕಟ್ಟಿರುವುದಕ್ಕೆ ಒಪ್ಪಿಕೊಂಡಿದ್ದೀರಿ. ಅದನ್ನು ಕಟ್ಟಿ ಎಷ್ಟು ವರ್ಷವಾಯಿತು?

ಶ್ರೀ ಅಣ್ಣಾರಾವ್ ಗಣಮುಖಿ.—ತಮಗೇ ಗೊತ್ತಿರ ಬಹುದು.

ಶ್ರೀ ಬಿ. ಇ. ರಾಮಯ್ಯ.—ಇದುವರೆಗೂ ಹೈಸ್ಕೂಲ್ ಬಿಲ್ಡಿಂಗು ಕಂಪ್ಲೀಟ್ ಆಗಿಲ್ಲ, ಕಾರಣ ವೇನು?

ಶ್ರೀ ಅಣ್ಣಾರಾವ್ ಗಣಮುಖಿ.—ಎಕ್ಸಿಕ್ಯೂಟಿವ್ ಇಂಜನಿಯರಿಂದ ಅಂದಾಜು ಬಂದಿಲ್ಲ. ಬಂದನಂತರ ಸರ್ಕಾರದವರು ಸ್ಯಾಂಕ್ಷನ್ ಮಾಡುತ್ತಾರೆ.

ಶ್ರೀ ಬಿ. ಇ. ರಾಮಯ್ಯ.—ನಿಧಾನವಾಗಲು ಕಾರಣವಾದರೂ ಏನು?

ಶ್ರೀ ಅಣ್ಣಾರಾವ್ ಗಣಮುಖಿ.—ಎಸ್ಟಿಮೇಟ್ಸ್ ಕಳುಹಿಸುವುದಕ್ಕೆ ಸರ್ಕಾರದವರು 13ನೇ ಮಾರ್ಚ್ 1959ರಲ್ಲಿ ಲೆಟರ್ ಬರೆದಿದ್ದಾರೆ. ಅದು ಬರಬೇಕೆಂದು ಹೇಳಿದ್ದೇನೆ.

ಶ್ರೀ ಬಿ. ಇ. ರಾಮಯ್ಯ.—ಮಲ್ಟಿಪರ್‌ಪಸ್ ಹೈಸ್ಕೂಲನಲ್ಲಿ ಸ್ಥಳದ ಅಭಾವವಿದೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಗೊತ್ತಿಲ್ಲ. ಎಸ್ಟಿಮೇಟ್ ಬಂದಿಲ್ಲ, ತರಿಸುತ್ತೇವೆ.

Dr. R. NAGAN GOWDA.—May I know whether the government have made any provision to give a grant to this High school for this year?

Sri ANNA RAO GANAMUKHI.—Out of the lumpsum grant we provide money. It is not necessary that separate provision must be made for separate high school.